ಕಾಣಿಸುತ್ತದೆ. 'ವಿಶ್ವದ ಅರ್ಧಕ್ಕೂ ಹೆಚ್ಚು ಜನ ಇಂಗ್ಲಿಷ್ ಮಾತನಾಡುತ್ತಾರೆ' ಎಂದು ಉದ್ಗರಿಸುವ ಎವೆರಿಸ್ಟೊನ ಮೊಮ್ಮಗಳು ಲುವಿಯಾಗೆ, ತನ್ನ ಇಂಗ್ಲಿಷನ್ನು ಸುಧಾರಿಸಿಕೊಂಡು ಅಮೆರಿಕಗೆ ಹೋಗಿ ಬದುಕು ಕಟ್ಟಿಕೊಳ್ಳುವ ಆಸೆ. ಹೀಗೆ ಇಂಗ್ಲಿಷ್ ಬಗ್ಗೆ ಆಸೆಕಂಗಳಾಗಿರುವ ಹುಡುಗಿಗೆ ತನ್ನಜ್ಜನ ಝಿಕ್ರಿಲ್ ಬಗ್ಗೆ ಯಾವ ಆಸಕ್ತಿಯೂ ಇಲ್ಲ. ಮಾರ್ಟಿನ್‌ನ ಪರಿಚಯವಾಗುವವರೆಗೆ ಝಿಕ್ರಿಲ್ ಅವಳ ಪಾಲಿಗೆ ಅಪರಿಚಿತ ಜಗತ್ತಾಗಿಯೇ ಉಳಿದಿರುತ್ತದೆ. ಎವೆರಿಸ್ಟೊನ ಮೊಮ್ಮಗಳಂಥ ತಲೆಮಾರನ್ನೇ ಕನ್ನಡದ ಸಂದರ್ಭದಲ್ಲಿ ಅಥವಾ ಭಾರತದ ಸಂದರ್ಭದಲ್ಲಿ ಸೃಷ್ಟಿಸುತ್ತಿದ್ದೇವೆ ಎನ್ನುವುದನ್ನು ಕಲ್ಪಿಸಿಕೊಂಡರೆ, ಝಿಕ್ರಿಲ್ ಇಲ್ಲೇ ನಮ್ಮ ನಡುವೆಯೇ ಉಸಿರಾಡುತ್ತಿದ್ದ ಇಲ್ಲವೇ ಉಸಿರಾಡುತ್ತಿರುವ ನುಡಿ ಎನ್ನಿಸುತ್ತದೆ.

ಭಾಷೆಯೊಂದರ ಜೊತೆಗೆ ನಾವು ಏನೆಲ್ಲವನ್ನು ಕಳೆದುಕೊಳ್ಳುತ್ತೇವೆ ಎನ್ನುವುದನ್ನು ಸಿನಿಮಾ ರೂಪಕದ ಭಾಷೆಯಲ್ಲಿ ಹೇಳುತ್ತದೆ. ಝಿಕ್ರಿಲ್‌ನ ಭಾವಕೋಶ ಇಲ್ಲಿ ಮನುಷ್ಯರಿಗಷ್ಟೇ ಸಂಬಂಧಿಸಿದ್ದಲ್ಲ, ಅದು ಪ್ರಾಣಿಗಳು ಕೂಡ ಸಂವಹಿಸುವ ಅದ್ಭುತ ಭಾಷೆ. ಈ ಭಾಷೆಗೆ ಕಾಡೂ, ಕಾಡಿನ ಕೊರಳೂ ಸ್ಪಂದಿಸುತ್ತದೆ. ಝಿಕ್ರಿಲ್ ಮೂಲಕವೇ ಕಥೆಯಲ್ಲಿ ಸಂಬಂಧ, ವಿರೋಧ, ಮರುಬಂಧ, ನೆನಪು, ವಿಷಾದ, ಕ್ಷಮೆ ಎಲ್ಲವೂ ಸಾಧ್ಯವಾಗಿವೆ. ಭಾಷೆಯ ಕಾರಣದಿಂದಾಗಿ ಉಂಟಾಗುವ ತರತಮವನ್ನೂ ಸಿನಿಮಾ ಸೂಕ್ಷ್ಮವಾಗಿ ಸೂಚಿಸುತ್ತದೆ. ಇಬ್ಬರು ಪ್ರಾಣಸ್ನೇಹಿತರು ಚೆಲುವೆಯೊಬ್ಬಳನ್ನು ಪ್ರೇಮಿಸುತ್ತಾರೆ. ಸ್ಪ್ಯಾನಿಷ್ ಗೊತ್ತಿರುವ ಕಾರಣಕ್ಕೆ ಒಬ್ಬನಿಗೆ ಪ್ರೇಮ ದೊರೆಯುತ್ತದೆ; ಗೊತ್ತಿಲ್ಲದಿರುವ ಕಾರಣಕ್ಕೆ ಇನ್ನೊಬ್ಬ ಸ್ತ್ರೀಕಟಾಕ್ಷದಿಂದ ವಂಚಿತನಾಗುತ್ತಾನೆ. ಝಿಕ್ರಿಲ್ ಹೊರತು ಬೇರೆ ಭಾಷೆ ಗೊತ್ತಿಲ್ಲದಿರುವ ಅವನು ಅವಳ ಪಾಲಿಗೆ ಪ್ರಾಣಿಯಂತೆ ಕಾಣಿಸುತ್ತಾನೆ. ಇಂದಿನ ಇಂಗ್ಲಿಷ್ ಸೃಷ್ಟಿಸಿರುವ ತರತಮವನ್ನೇ ಇಲ್ಲೂ ಕಾಣಬಹುದು.

ಝಿಕ್ರಿಲ್ ಜೊತೆಗೆ ಇಸಾವುರೊಗೆ ಸ್ಪ್ಯಾನಿಷ್ ತಿಳಿದಿದ್ದರೆ ಅವನ ಬದುಕಿನ ದಿಕ್ಕು ಬೇರೆಯಾಗುತ್ತಿತ್ತೇ? ಇದು ಪ್ರೇಮದ ಸಾಫಲ್ಯಕ್ಕೆ ಸಂಬಂಧಿಸಿದ ಪ್ರಶ್ನೆಯಷ್ಟೇ ಅಲ್ಲ — ಊರಿನ ಜನರ ಪಾಲಿಗೆ ಇಸಾವುರೊ ಪಳೆಯುಳಿಕೆಯಂತೆ ಕಾಣಿಸುವುದರ ಹಿನ್ನೆಲೆಯಲ್ಲಿ ಈ ಪ್ರಶ್ನೆಗೆ ಉತ್ತರ ಹುಡುಕಬೇಕು. ಭಾಷೆಯ ಕಾರಣದಿಂದಾಗಿ ಅವನು ಜಗತ್ತೊಂದನ್ನು ಕಳೆದುಕೊಂಡಂತೆ, ಅವನ ಭಾಷೆಯನ್ನು ಅರಿಯದ ಕಾರಣಕ್ಕಾಗಿ ನಾವು ಕೂಡ ಇನ್ನೊಂದು ಜಗತ್ತನ್ನು ಕಳೆದುಕೊಂಡಿದ್ದೇವೆ. ಅಂದರೆ, ಪ್ರತಿಯೊಂದು ಭಾಷೆಯೂ ವಿಶ್ವವನ್ನು ತನ್ನದೇ ರೀತಿಯಲ್ಲಿ ನೋಡುವ ಕಣ್ಣುಗಳನ್ನು ಒಳಗೊಂಡಿರುತ್ತದೆ. ನಾವು ಆ ಭಾಷೆಯಿಂದ ದೂರವಾಗುವುದೆಂದರೆ, ಅಷ್ಟರಮಟ್ಟಿಗೆ ದೃಷ್ಟಿವಂಚಿತರಾದಂತೆ.

ಸಂಬಂಧಗಳ ಬೆಸುಗೆ ಹಾಗೂ ಬಿರುಕು ಚಿತ್ರದಲ್ಲಿನ ಮತ್ತೊಂದು ಪ್ರಮುಖ ಅಂಶ. ಜಿದ್ದಿಗೆ ಬಿದ್ದ ಮುದುಕರಿಬ್ಬರ ತಾರುಣ್ಯದ ದಿನಗಳು ಗೆಳೆತನದ ಅಪೂರ್ವ ಮಾದರಿಯಂತಿವೆ. ಒಬ್ಬರ ಆತ್ಮವನ್ನು ಮತ್ತೊಬ್ಬರು ಮುಟ್ಟಿದಂತಹ ಈ ಗೆಳೆಯರ ನಡುವೆ 'ಸಲಿಂಗಿಗಳು' ಎನ್ನುವ ನಂಟೂ ಇದೆ. ಇಂಥವರ ನಡುವೆ ಹೆಣ್ಣೊಬ್ಬಳು ಗೋಡೆಯಾಗಿ ಬರುತ್ತಾಳೆ. ಅವಳ ಕಾರಣಕ್ಕಾಗಿ ಎವೆರಿಸ್ಟೊ ಹಾಗೂ ಇಸಾವುರೊ ಪರಸ್ಪರ ಮುಖ ನೋಡಿಕೊಳ್ಳಲೂ ಆಗದಷ್ಟು ದ್ವೇಷಕ್ಕೆ ಬೀಳುತ್ತಾರೆ. ಹೆಣ್ಣಿನ ಮೋಹದ ಕಾರಣಕ್ಕೆ ಹಾಳಾಗುವಷ್ಟು ಕ್ಷುಲ್ಲಕವಾದುದೇ ಇಬ್ಬರ ಗೆಳೆತನ? ಈ ಪ್ರಶ್ನೆಗೆ ಸಿನಿಮಾದಲ್ಲಿ ಸ್ಪಷ್ಟ ಉತ್ತರವಿಲ್ಲ. ಝಿಕ್ರಿಲ್‌ನಂತೆಯೇ ಬದುಕು ಕೂಡ ನಿಗೂಢ ಎನ್ನುವುದನ್ನು ಸಿನಿಮಾ ಹೇಳುವಂತಿದೆ. ಮುದುಕರಿಬ್ಬರ ಝಿಕ್ರಿಲ್‌ನ ಮಾತುಗಳನ್ನು ಕೂಡ ವಿವರಿಸುವ ಗೋಜಿಗೆ ನಿರ್ದೇಶಕರು ಹೋಗುವುದಿಲ್ಲ. ಅದೆಲ್ಲವೂ ನೋಡುವವರ ಮನಸ್ಸಿನಲ್ಲಿ